

‘ಇದುವೇ ಆ್ಯಂಟಿ ರೇಬೀಸ್ ಇಂಜೆಕ್ಷನ್’ ಎಂದು ಭಟ್ಟರಲ್ಲಿ ಹೇಳಬೇಕು. ಆದರೆ ಅದು ರೇಬಿಪ್ಯೂರ್ ಆಗಿರಬಾರದು. ಬರೇ ಬಿ ಕಾಂಪ್ಲೆಕ್ಸ್ ಮಾತ್ರ. ಆದರೆ ನನಗೆ ಈ ಪ್ಲಾಸಿಬೋ ಚಿಕಿತ್ಸೆ ಕೊಡಲು ಮನಸ್ಸಿಲ್ಲ. ಅಕಸ್ಮಾತ್ ಆ ಬೆಕ್ಕು ರೇಬೀಸ್‌ನದ್ದೇ ಆಗಿದ್ದರೆ, ಅವರಿಗೆ ಜೀವಹಾನಿ, ನನಗೆ ಮಾನಹಾನಿ. ಆದ್ದರಿಂದ ಅವರು ನಾಳೆ ರಾಂಪುರ ಸಾರ್ವಜನಿಕ ಸರಕಾರಿ ಆಸ್ಪತ್ರೆಗೆ ಹೋಗಲಿ. ಅಲ್ಲಿ ರೇಬಿಪ್ಯೂರ್ ಇದ್ದರೆ ಅಲ್ಲಿ ಮೂರು ಅಥವಾ ಆರು ಇಂಜೆಕ್ಷನ್ ತಗೊಳ್ಳಬಹುದು. ನನಗಂತೂ ಇದರ ಉಸಾಬರಿ ಬೇಡ’ ಎಂದರು.

ಕುಪ್ಪಣ್ಣಯ್ಯನಿಗೆ ಸಂತೋಷವಾಯಿತು. ಅವರು, ‘ಈ ರೇಬಿಪ್ಯೂರ್ ಇಂಜೆಕ್ಷನನ್ನು ಸುಮ್ಮನೆ ಅಂದರೆ ರೇಬೀಸ್